ಹೀಗಿರುವಾಗ ಒಂದು ದಿನ, ನಿವೃತ್ತರಾಗಿ ಹೊಲ ತೋಟ ನೋಡಿಕೊಂಡು ಊರಿನಲ್ಲಿಯೇ ನೆಲೆಸಿದ್ದ ಶಾಮಣ್ಣ ಮಾಸ್ತರರ ತೋಟ ಅಗೆಯುವ ಕೆಲಸಕ್ಕೆ ಹೋದ ಮಾದನ ಹಣೆಬರಹ ಮತ್ತೆ ಬದಲಾಯಿತು. ಮಾಸ್ತರರು ಕಷ್ಟಪಟ್ಟು ಕೆಲಸ ಮಾಡುತ್ತಿದ್ದ ಮಾದನ ಮನೋಭಾವವನ್ನು ಮೆಚ್ಚಿ ತುಮಕೂರು ಪಟ್ಟಣದ ಸರ್ಕಾರಿ ಕಚೇರಿಯಲ್ಲಿ ಆಗ ತಾನೆ ಅಧಿಕಾರಿಯಾಗಿ ಬಂದಿದ್ದ ತಮ್ಮ ಶಿಷ್ಯನ ಬಳಿ ಮಾದನ ವಿಷಯ ತಿಳಿಸಿ ಯಾವುದಾದರೂ ತಾತ್ಕಾಲಿಕ ಕೆಲಸ ಕೊಡಿಸಲು ಕೇಳಿಕೊಂಡಿದ್ದರು. ಮಾಸ್ತರರ ಶಿಷ್ಯನ ಕೃಪೆಯಿಂದ ಅದೇ ಸರ್ಕಾರಿ ಕಚೇರಿಯಲ್ಲಿ ಕಸಗುಡಿಸುವ ಅರೆಕಾಲಿಕ ನೌಕರನಾಗಿ ಮಾದ ಕೆಲಸಕ್ಕೆ ಸೇರಿ ಆರು ವರ್ಷಗಳಾಗಿ ಹೋಗಿದ್ದವು. ಮಾದನಲ್ಲದೆ ಅವನ ಜೊತೆ ದಿನವೂ ಕುಡಿದೂ ಕುಡಿದು ಸಣಕಲನಾಗಿದ್ದ ಕಡ್ಡಿ ಸೀನ, ಮಂಜ ಮತ್ತು ಸಣ್ಣಮ್ಮನೆಂಬ ಇತರ ಮೂವರೂ ಕಸ ಗುಡಿಸುವ ಅರೆಕಾಲಿಕ ನೌಕರರಾಗಿ ಕೆಲಸ ಮಾಡುತ್ತಿದ್ದರು.

ಯಾವುದೇ ಭತ್ಯಗಳಿಲ್ಲದೆ ನಿಗದಿತ ಸಂಬಳ ಪಡೆದು ಕೆಲಸ ಮಾಡುತ್ತಿದ್ದ ಅರೆಕಾಲಿಕ ನೌಕರರಿಗೆ ಕೆಲಸದ ಭದ್ರತೆ ಇರಲಿಲ್ಲ. ಅವರನ್ನು ಯಾವಾಗ ಬೇಕಾದರೂ ಕೆಲಸದಿಂದ ತೆಗದುಹಾಕಬಹುದಾಗಿತ್ತು. ಆದರೂ ಸಾಮಾನ್ಯವಾಗಿ ಪ್ರತಿ ಆರ್ಥಿಕ ವರ್ಷದ ಕೊನೆಯಲ್ಲಿ ಅರೆಕಾಲಿಕ ಕೆಲಸಗಾರರನ್ನು ಮುಂದುವರೆಸುವ ಅಥವಾ ಬೇರೊಬ್ಬರನ್ನು ನೇಮಿಸಿಕೊಳ್ಳುವ ನಿರ್ಧಾರವನ್ನು ಕಚೇರಿಯ ಸಾಹೇಬರು ತೆಗೆದುಕೊಳ್ಳುತಿದ್ದರು. ಮಾದನಿಗೆ ಇಷ್ಟು ವರ್ಷ ಅದೇನೂ ದೊಡ್ಡ ಸಮಸ್ಯೆಯಾಗಿರಲಿಲ್ಲ. ಸಿಬ್ಬಂದಿ ವಿಭಾಗದ ಗುಮಾಸ್ತನ ಬಳಿ ಹೋಗಿ ತುಸು ಕೈ ಬೆಚ್ಚಗೆ ಮಾಡಿದರೆ ಸಾಕಾಗಿತ್ತು. ಮತ್ತೆ ಒಂದು ವರ್ಷ ನಿರಾಳವಾಗಿರಬಹುದಾಗಿತ್ತು. ಆದರೆ ಈಗ ಇರುವ ಸಾಹೇಬ ಅತಿ ಸಿಡುಕಿನ ಮನುಷ್ಯ. ಆಫೀಸಿನಲ್ಲಿ ಯಾರನ್ನೂ ಹತ್ತಿರಕ್ಕೆ ಸೇರಿಸುತ್ತಿರಲಿಲ್ಲ. ಸಿಬ್ಬಂದಿ ವಿಭಾಗದ ಗುಮಾಸ್ತ ಕೂಡ ಈ ಬಾರಿ ಸಾಹೇಬರನ್ನೇ ಖುದ್ದಾಗಿ ಕಾಣುವಂತೆ ತಿಳಿಸಿದ್ದ. ಮಾದನಿಗೋ ಸಾಹೇಬರನ್ನು ಕಂಡರೆ ಒಳಗೊಳಗೇ ಭಯವಾಗುತ್ತಿತ್ತು. ಅವರನ್ನು ಖುದ್ದಾಗಿ ಭೇಟಿ ಮಾಡುವ ಧೈರ್ಯವಿಲ್ಲದೆ ದಿನಗಳು ಹತ್ತಿರವಾದಂತೆಲ್ಲಾ ಈ ವರ್ಷ ತನ್ನನ್ನು ಕೆಲಸದಲ್ಲಿ ಮುಂದುವರೆಸುತ್ತಾರೊ ಇಲ್ಲವೋ ಎಂಬ ಆತಂಕ ಹೆಚ್ಚಾಗಿ ಚಡಪಡಿಕೆ ಶುರುವಾಗಿತ್ತು.

ಆಫೀಸಿನ ಕಸ ಗುಡಿಸಿ ಸಾಹೇಬರ ಕೊಠಡಿಯ ಕಸವನ್ನೂ ಅಚ್ಚುಕಟ್ಟಾಗಿ ಗುಡಿಸಿ ಸಾಹೇಬರು ಬರುವ ಸಮಯವಾಯಿತೆಂದುಕೊಂಡು ಕಸಪೊರಕೆಯನ್ನು ಅದರ ಸ್ಥಾನದಲ್ಲಿಟ್ಟು ಬಂದ ಮಾದನಿಗೆ ಕೆಲಸ ಹೋದರೆ ಮುಂದೇನು ಮಾಡುವುದು ಎಂದು ತಿಳಿಯದೆ ತನ್ನ ಹೆಂಡತಿ ನಿಂಗಿಯ ಮೇಲೆ ಸಿಟ್ಟು ಬಂದಿತು. ಇಬ್ಬರು ಮಕ್ಕಳನ್ನು ಗೌರ್ಮೆಂಟ್ ಇಸ್ಕೂಲಿಗೆ ಸೇರಿಸೋಣವೆಂದರೆ ಕೇಳದೆ ಹಟ ಹಿಡಿದು ತಮ್ಮ ಬಾಡಿಗೆ ಮನೆಯಿದ್ದ ಕೇರಿಯಿಂದ ಮೂರು ಮೈಲಿ ದೂರದಲ್ಲಿ ಹೊಸದಾಗಿ ಪ್ರಾರಂಭವಾಗಿದ್ದ ಕಾನ್ವೆಂಟಿಗೆ ಸೇರಿಸಿದ್ದಳು. ವ್ಯಾನಿನ ಬಾಡಿಗೆ, ಇಸ್ಕೂಲಿನ ಫೀಸು ಎಂದು ಪ್ರತಿ ತಿಂಗಳು ಇಬ್ಬರು ಮಕ್ಕಳಿಗೂ ಸೇರಿ ಒಂದೂವರೆ ಸಾವಿರ ರೂಪಾಯಿ ಕಟ್ಟಬೇಕಾಗಿತ್ತು. ಮಾದನಿಗೆ ಬರುತಿದ್ದ ಸಂಬಳದ ಜೊತೆ ನಿಂಗಿಯೂ ಅವರಿವರ ಮನೆಗೆಲಸ ಮಾಡಿ ತರುತಿದ್ದ ಹಣದಿಂದ ಹೇಗೋ ಸಂಸಾರ ಸಾಗುತ್ತಿತ್ತು.

ಕಚೇರಿಯ ಇನ್ನೊಂದು ಕಟ್ಟಡದಲ್ಲಿ ಕಸ ಗುಡಿಸುತಿದ್ದ ಕಡ್ಡಿ ಸೀನ ಯಾವುದೋ ಖುಷಿಯಿಂದ ಸಿಳ್ಳು ಹಾಕಿಕೊಂಡು ಬಂದಿದ್ದು ಕಂಡು ಮಾದನಿಗೆ ಒಳಗೊಳಗೆ ಹೊಟ್ಟೆ ಉರಿಯಿತು. ಕಿಲಾಡಿ ನನ್ಮಗ ಏನೋ ಮಾಡಿ ಕೆಲ್ಸ ಗಟ್ಟಿ ಮಾಡ್ಕಂಡಿರಂಗೆ ಕಾಣಿಸ್ತದೆ ಎಂದುಕೊಂಡು, 'ಏನ್ಲಾ ಸೀನ...